# ಎನ್‌ಐಟಿಕೆ: ರಾಷ್ಟ್ರೀಯ ಏಕತಾ ದಿನಾಚರಣೆ




**ಸುರತ್ಕಲ್, ಅ. 31:** ಸುರತ್ಕಲ್‌ನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ ಐಟಿಕೆ) ವತಿಯಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಯಿತು.

ಅ. 25ರಿಂದ 31ರ ವರೆಗೆ ನಡೆದ ಏಕತಾ ಸಪ್ತಾಹದ ಭಾಗವಾಗಿ, ಎನ್ ಐಟಿಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯ ಸ್ಮರಣಾರ್ಥ ಏಕತಾ ಓಟ ಮತ್ತು ಏಕತಾ ಪ್ರತಿಜ್ಞೆ ಸೇರಿದಂತೆ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

**ಯುನಿಟಿ ರನ್**

ಯುನಿಟಿ ರನ್‌ನಲ್ಲಿ ನಿರ್ದೇಶಕ ಪ್ರೊ| ಬಿ. ರವಿ, ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ| ಎ.ಸಿ. ಹೆಗ್ಡೆ ಇತರ ಡೀನ್ ಗಳು, ಆಡಳಿತ ಮುಖ್ಯಸ್ಥರು, ಎನ್‌ಐಟಿಕೆ ಬೋಧಕ ಮತ್ತು ಬೋಧಕೇತರ ಸಿಬಂದಿ ಭಾಗವಹಿಸಿದ್ದರು.

Udayavani, Date: 01/11/23, p, no -04